೧	೨	೩
೭.	ಮಂಡ್ಯ	೫೪೪–೮೦
೮.	ಹಾಸನ	೧೧೨–೦೫
೯.	ದಕ್ಷಿಣಕನ್ನಡ	೧೦೫೯–೯೦
೧೦.	ಕೊಡಗು	೮೧೫–೧೪
೧೧.	ಚಿಕ್ಕಮಗಳೂರು	೨೪೯–೯೯
೧೨.	ಬೆಳಗಾವಿ	೧೫೮೨–೨೨
೧೩.	ಬಿಜಾಪುರ	೪೦೦–೬೪
೧೪.	ಧಾರವಾಡ	೬೮೨–೭೬
೧೫.	ಉತ್ತರಕನ್ನಡ	೫೪೮–೪೫
೧೬.	ಗುಲ್ಬರ್ಗಾ	೯೫–೫೩
೧೭.	ಬೀದರ್	೫೭೭–೫೧
೧೮.	ರಾಯಚೂರು	೧೮೮–೫೭
೧೯.	ಬಳ್ಳಾರಿ	೨೯೮–೪೫
		೮೯೨೩–೧೨

ಅಂಗನವಾಡಿಗಳ ಬಗ್ಗೆ

೧೧೨ (೨೮೨) ಶ್ರೀ ಚಂದ್ರಶೇಖರ ಪಾಮಾನಿ (ಪರಸಗಡ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

(ಅ) ರಾಜ್ಯದಲ್ಲಿ ಎಷ್ಟು ಐ. ಸಿ. ಡಿ. ಎಸ್. ಬ್ಲಾಕ್‌ಗಳನ್ನು ಪ್ರಾರಂಭಿಸಲಾಗಿದೆ, ಹಾಗೂ ಸಮಿತಿ ತಾಲ್ಲೂಕಿನಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ ಮತ್ತು ಇವುಗಳ ಕಾರ್ಯಕ್ರಮವೇನು ?

(ಆ) ಈ ಕೇಂದ್ರಗಳಿಗೆ ವೈದ್ಯಕೀಯ ಸೌಲಭ್ಯ ಕಲ್ಪಿಸಲಾಗಿದೆಯೆ ?

(ಇ) ಹಾಗಿದ್ದಲ್ಲಿ, ಪ್ರತಿ ಕೇಂದ್ರಕ್ಕೆ ವೈದ್ಯರು ಭೇಟಿ ನೀಡಿ ಚಿಕಿತ್ಸೆ ನೀಡುವರೆ ?

(ಈ) ಸಮಿತಿ ಐ. ಸಿ. ಡಿ. ಎಸ್. ಬ್ಲಾಕ್‌ದಿಂದ ಸರಕಾರದ ಆದೇಶ ಕ್ರಮ ಸಂಖ್ಯೆ ಎಸ್‌ಡಬ್ಲ್ಯೂಎಲ್ ೯೩ ಎಸ್‌ಡಬ್ಲ್ಯೂಡಬ್ಲ್ಯೂ ೮೧ ದಿನಾಂಕ ೨೨–೩–೧೯೮೨ರ ಪ್ರಕಾರ ಈ ಯೋಜನೆಗಳಲ್ಲಿ ಲಾಭ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು ? (ಗ್ರಾಮವಾರು ವಿವರ ನೀಡುವುದು)

ಶ್ರೀ ಜಿ. ಬಸವಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

(ಅ) ರಾಜ್ಯದಲ್ಲಿ ೯೪ ಐ. ಸಿ. ಡಿ. ಎಸ್. ಬ್ಲಾಕ್‌ಗಳನ್ನು ಪ್ರಾರಂಭಿಸಲಾಗಿದೆ. ಸಮಿತಿ ತಾಲ್ಲೂಕಿನಲ್ಲಿ ೨೨೨ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಇವುಗಳು ಮಕ್ಕಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸುತ್ತಿವೆ.

೧. ಪೂರಕ ಪೌಷ್ಟಿಕ ಆಹಾರ
೨. ಅನೌಪಚಾರಿಕ ಶಾಲಾಪೂರ್ವ ಶಿಕ್ಷಣ
೩. ಆರೋಗ್ಯ ತಪಾಸಣೆ
೪. ರೋಗ ನಿರೋಧಕ ಚುಚ್ಚುಮದ್ದು ನೀಡುವಿಕೆ.
೫. ಸಂಚಾರ ಸೇವೆ.

(ಆ) ಹೌದು.

(ಇ) ಹೌದು.

(ಈ) ೧೫೦ ಫಲಾನುಭವಿಗಳು ಪ್ರಯೋಜನ ಪಡೆದಿರುವವರು

(ಗ್ರಾಮವಾರು ವಿವರದ ಪಟ್ಟಿಯನ್ನು ಲಗತ್ತಿಸಿದೆ)

ಸವದತ್ತಿ ಐ.ಸಿ.ಡಿ.ಎಸ್. ಬ್ಲಾಕಿನಲ್ಲಿ ಸರ್ಕಾರಿ ಆದೇಶ ಕ್ರಮ ಸಂಖ್ಯೆ ಎಸ್‌ಡಬ್ಲ್ಯುಎಲ್ ೯೩ ಎಸ್‌ಡಬ್ಲ್ಯುಡಬ್ಲ್ಯು ೮೧, ದಿನಾಂಕ ೨೨-೩-೧೯೮೨ರ ಪ್ರಕಾರ ಗೃಹ ಕಲ್ಯಾಣ ಯೋಜನೆ ಅಡಿಯಲ್ಲಿ ಲಾಭ ಪಡೆದ ಫಲಾನುಭವಿಗಳ ಸಂಖ್ಯೆ ಮತ್ತು ಗ್ರಾಮವಾರು ವಿವರ:—

ಕ್ರಮ ಸಂಖ್ಯೆ	ಗ್ರಾಮದ ಹೆಸರು	ಯೋಜನೆಯಲ್ಲಿ ಲಾಭ ಪಡೆದ ಫಲಾನುಭವಿಗಳ ಸಂಖ್ಯೆ		
		೧೯೮೪-೮೫	೧೯೮೫-೮೬	೧೯೮೬-೮೭
೧	ಪುಲಿಕಟ್ಟಿ	೧೧	೧	—
೨	ಇನಾಮ್‌ಹೊಂಗಲ್	೧೫	—	—
೩	ಯೆರಗಟ್ಟಿ, ಸಟ್ಟಿಗೇರಿ	೭	೩	—
೪	ಸೌಂದತ್ತಿ, ಬೆಟಸೊರ್	೨೫	—	—
೫	ಸೌಂದತ್ತಿ	೧೧	೫	—
೬	ಸೌಂದತ್ತಿ (ನಗರ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರುವುದು)	—	೧೮	೭
೭	ತಲ್ಲೂರು	೩	—	—
೮	ಹಿರೇ ಉಳ್ಳಿಗೆರೆ	೧೨	—	—
೯	ಯರ್‌ಜರ್ವಿ	—	೪	—
೧೦	ಮುರಗೋಡ್	—	೧೦	—
೧೧	ಉಗರ್‌ಗೋಳ್	—	೧	—
೧೨	ಚಿಕ್ಕೊಡಿ	—	೪	—
೧೩	ಶಿವಪುರ	—	೨	—
೧೪	ಹಿರೆಕುಂಬಿ	...	೯	—
೧೫	ಯಲ್ಲಮ್ಮ ತಂಡೆ	—	೩	—
		೮೩	೬೦	೭

ಒಟ್ಟು ೧೫೦ ಫಲಾನುಭವಿಗಳು ೧೯೮೪-೮೫, ೧೯೮೫-೮೬, ೧೯೮೬-೮೭ನೇ ಸಾಲಿನಲ್ಲಿ ಮೇಲಿನ ಯೋಜನೆಯಲ್ಲಿ ಲಾಭ ಪಡೆದಿರುತ್ತಾರೆ.

ಸಂಳ್ಳಿ ಜಾತಿ ಪ್ರಮಾಣ ಪತ್ರ ನೀಡಿ ಸರ್ಕಾರಿ ನೌಕರಿ ಹೊಂದುವವರ ಬಗ್ಗೆ

೧೧೪ (೪೫) ಶ್ರೀ ಗೋಪಾಲ ಮುಕುಂದ ಕಾನಡೆ (ಖಿರ್ಸಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಇತರೆ ವರ್ಗದವರು ಹರಿಜನ ಗಿರಿಜನ ವರ್ಗದವರೆಂದು ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಸರ್ಕಾರಿ ನೌಕರಿ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?